# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,**

**ಮಹದೇವಪುರ ವಲಯ, ಬೆಂಗಳೂರು – 560 113.**

ಸಂಖ್ಯೆ:ಕಿ.ಅ/ವಾರ್ಡ್–25/ಪಿ.ಆರ್/ /2021–22 ದಿನಾಂಕ:–03.03.2022

## "ಸಭಾ ಸೂಚನಾ ಪತ್ರ"

**ವಿಷಯ:**– ದಿನಾಂಕ:–05.03.2022 ಶನಿವಾರ ಬೆಳಿಗ್ಗೆ 11.00 ಗಂಟೆಗೆ ಹೊರಮಾವು ಉಪವಿಭಾಗ ವಾರ್ಡ್ ನಂ.25 ರ ಕಛೇರಿಯಲ್ಲಿ ನಡೆಯುವ ಸಭೆಗೆ ಹಾಜರಾಗುವ ಬಗ್ಗೆ.

**ಉಲ್ಲೇಖ:**–ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020–21, ದಿನಾಂಕ:21/09/2020.

**********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿಗಳು ವಾರ್ಡ್ ನಂ.25 ರ ಹೊರಮಾವು ಉಪವಿಭಾಗಕ್ಕೆ ಸಂಬಂಧಿಸಿದ ಮಾಹಿತಿಗಳೊಂದಿಗೆ ದಿನಾಂಕ:–05.03.2022 ಶನಿವಾರ ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.25 ರ ಸ.ಕಾ.ಅ ಹೊರಮಾವು ಕಛೇರಿಗೆ ಹಾಜರಾಗಲು ಕೋರಲಾಗಿದೆ.

**<u>ವಿಶೇಷ ಸೂಚನೆ:–</u>** Covid–19 ಇರುವುದರಿಂದ ಎಲ್ಲಾರು ಕಡ್ಡಾಯವಾಗಿ ಸ್ಯಾನಿಟೈಜರ್ ಬಳಸಿ, ಮಾಸ್ಕ್ ಧರಿಸಬೇಕು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.

ಸಂಚಾಲಕರು
ಮತ್ತು ಸಹಾಯಕ ಅಭಿಯಂತರರು
ಹೊರಮಾವು ವಾರ್ಡ್ ಸಂಖ್ಯೆ–25.

**ರವರಿಗೆ.**

1. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಪುರ ವಿಭಾಗ, ಬಿಬಿಎಂಪಿ.
2. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಮಹದೇವಪುರ ವಲಯ) ಬಿಬಿಎಂಪಿ.
3. ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ. ಸಿಎಂಸಿ
4. ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ. 110 ಹಳ್ಳಿಗಳ ವ್ಯಾಪ್ತಿ.
5. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
6. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು ಬಿಬಿಎಂಪಿ.
7. ಕಾರ್ಯಪಾಲಯ ಅಭಿಯಂತರರು, ಕೆರೆಗಳ ವಿಭಾಗ, ಬಿಬಿಎಂಪಿ.
8. ಕಾರ್ಯಪಾಲಯ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿಬಿಎಂಪಿ.
9. ಆರೋಗ್ಯ ವೈಧ್ಯಾಧಿಕಾರಿಗಳು, ಕೆ.ಆರ್.ಪುರ.
10. ಸಹಾಯಕ ನಿರ್ದೇಶಕರು, ನಗರ ಯೋಜನೆ, ಮಹದೇವಪುರ ವಲಯ. ಬಿಬಿಎಂಪಿ.
11. ಡಾ//ಶಿವಕುಮಾರ್, ಆರೋಗ್ಯಾಧಿಕಾರಿಗಳು, ಕೆ.ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಕೆ.ಆರ್.ಪುರ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪವಿಭಾಗ, ಬಿಬಿಎಂಪಿ.
14. ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ಆರ್.ಟಿ.ನಗರ.
15. ಕಲ್ಯಾಣಾಧಿಕಾರಿಗಳು, ಮಹದೇವಪುರ ವಲಯ, ಬಿಬಿಎಂಪಿ.
16. ಪೊಲೀಸ್‌ಠಾಣೆ ಅಧಿಕಾರಿ ಹೆಣ್ಣೂರು/ಕೊತ್ತನೂರು/ರಾಮಮೂರ್ತಿನಗರ.
17. ಪೊಲೀಸ್ ಇನ್ಸ್‌ಪೆಕ್ಟರ್, ಲಾ ಅಂಡ್ ಆರ್ಡರ್ ರಾಮಮೂರ್ತಿನಗರ/ಕೊತ್ತನೂರು/ಹೆಣ್ಣೂರು ಪೊಲೀಸ್ ಠಾಣೆ. /ಟ್ರಾಫಿಕ್
18. ಪೊಲೀಸ್ ಇನ್ಸ್‌ಪೆಕ್ಟರ್, ಸಂಚಾರ ವಿಭಾಗ. ಬಾಣಸವಾಡಿ/ಕೆ.ಆರ್.ಪುರ.
19. ಕಛೇರಿ ಪ್ರತಿ.

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು- 560113**

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021--22 ದಿನಾಂಕ: 05.03.2022

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ರ ಆದೇಶನಂತೆ ಹೊರಮಾವು ವಾರ್ಡ್ ಸಂಖ್ಯೆ-25 ರ ನೋಡಲ್ ಅಧಿಕಾರಿಯಾದ ಶ್ರೀಮತಿ.ಸರೋಜದೇವಿ ಉಪ ಆಯುಕ್ತರು (ಮಹದೇವಪುರ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:-05.03.2022 ರಂದು ಪೂರ್ವಾಹ್ನ 11.00 ಗಂಟೆಗೆ ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತವೆ.

<u>ಉಪಸ್ಥಿತರು:</u>

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ-ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ರಮೇಶ್ | ಕಿರಿಯ ಅಭಿಯಂತರರು | |
| 3 | ಚೈತ್ರಾ ವೆಂಕಟೇಶ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು. | 8618910263 |
| 4 | ಶ್ರೀ.ಸಂಜಯ್ ಕುಮಾರ್ | ಹಿರಿಯ ಆರೋಗ್ಯ ನಿರೀಕ್ಷಕರು | |
| 5 | ಶ್ರೀ.ಪರೀಶ್ ಕುಮಾರ್ | ಕಿರಿಯ ಆರೋಗ್ಯ ನಿರೀಕ್ಷಕರು | |
| 6 | ಶ್ರೀ. ತಿರುಮಲ ಪ್ರಸಾದ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ | 9591646857 |
| 7 | ಶ್ರೀ.ನಾರಾಯಣ ಸ್ವಾಮಿ (ಎ.ಎಸ್.ಐ) | ಬಿ.ಟಿ.ವಿ.ಪಿ.ಎಸ್ | 9964205561 |
| 8 | ಶ್ರೀ.ಅಡಿವೆಪ್ಪ ನಾಯ್ಕರ್ ಮಾರ್ಷಲ್ | ವಾರ್ಡ್ ಮಾರ್ಷಲ್ | 8861579709 |
| 9 | ಶ್ರೀ.ಮುರಳಿ | ಹೊರಮಾವು 'ಹಾರ್ಕ್' ಗ್ರೂಪ್ | |
| 10 | ಶ್ರೀ.ಭಾಸ್ಕರ್ ನಾಯ್ಡು | ಹೊಯ್ಸಳನಗರ | |
| 11 | ಶ್ರೀ.ಭೂಷಣ್.ಬಿ | | |
| 12 | ಶ್ರೀ.ತಿರುನಾವ್‌ಕರಸು | | |
| 13 | ಜೋಸೇಫ್ ಹೆನ್ರಿ | | |
| 14 | ಪಿ.ರಮೇಶ್ | | |
| 15 | ಜಿ.ಹರಿ ಬಾಬು | | |
| 16 | ಶ್ರೀ.ರಂಜಿತ್ | | |
| 17 | ನಿರ್ಮಲನ್.ಜಿ | | |
| 18 | ಡಾ|| ಎಂ.ಆರ್.ಕಲಕೆಸ್ತ್ರಿ | | |
| 19 | ಎಸ್.ಕೆ.ಸ್ವಾಮಿ | | |
| 20 | ರತ್ನ ಎಂ.ಗೌಡ | ರೋಚ ಎನ್‌ಕ್ಲೇವ್ | |
| 21 | ವಿಜಯ | | |
| 22 | ಸುನಿತ | | |
| 23 | ಭಾಗ್ಯ | | |
| 24 | ಮಾಧವ್ | ಮಂಜುನಾಥ ನಗರ | |
| 25 | ಆನಂದಕುಮಾರ್ | | |
| 26 | ಸುನಿತ.ಟಿ | ಸರ್.ಎಂ.ವಿ ನಗರ | |
| 27 | ಕೆ.ಪಿ.ಅಣ್ಣ | | |
| 28 | ಆಶಾ ದಯಾನಂದ | | |
| 29 | ಕುಸುಮ | | |
| 30 | ದಯಾನಂದ | ದಾಸಪ್ಪ ಬಡಾವಣೆ | |
| 31 | ಫ್ರಾನ್ಸಿಸ್ ರೀಗಲ್ | ಸಾಯಿಬಾಬಾ ಬಡಾವಣೆ | |
| 32 | ವಂದನ ಮಂಜುನಾಥ | ಸಾಯಿಬಾಬಾ ಬಡಾವಣೆ | |

ಮು.ತಿ.ನೋ

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

ಶ್ರೀ.ರೋಜ್ ಎನ್‌ಕ್ಲೇವ್ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿ ಡಾಂಬರೀಕರಣ ಮಾಡಿರುವ ಬಗ್ಗೆ ಪಾಲಿಕೆಗೆ ಧನ್ಯವಾದಗಳನ್ನು ತಿಳಿಸಿರುತ್ತಾರೆ. ಮತ್ತು ಮುಖ್ಯರಸ್ತೆಯಲ್ಲಿ ಬಸ್ ಶೆಲ್ಟರ್ ಅಳವಡಿಸಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು, ಹೊರಮಾವು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ಬಾಸ್ಕರ್ ನಾಯ್ಡು ಹಾಗೂ ಶ್ರೀ.ತಿರುನಾವ್‌ಕರಸು, ಶ್ರೀ ವಿಮಲ್, ಶ್ರೀ.ಶ್ರೀನಿವಾಸ್, ಶ್ರೀ.ಪದ್ಮನಾಭನ್, ಶ್ರೀ.ಶಿವದಾಸನ್ ಹೊಯ್ಸಳ ನಗರ ಎನ್‌ಕ್ಲೇವ್ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿ 3ನೇ ಮುಖ್ಯರಸ್ತೆಯಲ್ಲಿ ರಾಜಕಾಲುವೆ ಅರ್ಧಕ್ಕೆ ನಿಂತಿರುವ ಬಗ್ಗೆ ಪೂರ್ಣಗೊಳಿಸಲು ಮತ್ತು ಬೆಸ್ಕಾಂ ಲಿಂಕಿಂಗ್ ಪೂರ್ಣಗೊಳಿಸಲು ಕೋರಿರುತ್ತಾರೆ ಮತ್ತು 6ನೇ ಕ್ರಾಸ್ ಮತ್ತು 4ನೇ ಮುಖ್ಯರಸ್ತೆಯಲ್ಲಿ ಆರ್.ಸಿ.ಸಿ ಚರಂಡಿ ನಿರ್ಮಿಸಲು ಮತ್ತು 20ನೇ ಅಡ್ಡರಸ್ತೆಯನ್ನು ಅಭಿವೃದ್ಧಿ ಪಡಿಸಲು ಹಾಗೂ 9ನೇ ಅಡ್ಡರಸ್ತೆಯಲ್ಲಿ ನೀರು ಸರಬರಾಜು ಪೈಪ್‌ಲೈನ್ ಅಳವಡಿಸಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು, ಹೊರಮಾವು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಮಲ್ಲಪ್ಪ ಬಡಾವಣೆ ಎನ್‌ಕ್ಲೇವ್ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿಬ ಪಾದಚಾರಿ ಗ್ರಿಲ್ ಅಳವಡಿಸಿರುವುದನ್ನು ತೆರವುಗೊಳಿಸಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು, ಹೊರಮಾವು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ದಯಾನಂದ್, ದಾಸಪ್ಪ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿ 1, 2, 3ನೇ ಅಡ್ಡರಸ್ತೆಯಲ್ಲಿ ಚರಂಡಿ ಮತ್ತು ರಸ್ತೆ ನಿರ್ಮಿಸಿ, ಡಾಂಬರೀಕರಣ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು, ಹೊರಮಾವು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ಬಿಂದೀಶ್, ಸಾಯಿ ರೆಸಿಡೆನ್ಸಿ  ಬಂಜಾರ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿ ಡಾಂಬರೀಕರಣ ಮಾಡಿರುವ ಬಗ್ಗೆ ಪಾಲಿಕೆಗೆ ಧನ್ಯವಾದಗಳನ್ನು ತಿಳಿಸಿದ್ದು, ರಸ್ತೆಯಲ್ಲಿ ಪಿಟ್ ವಾಟರ್ ಬರುತ್ತಿರುತ್ತದೆ. ಇದನ್ನು ಸ್ಥಗಿತಗೊಳಿಸಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು, ಹೊರಮಾವು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಿರಿಯ ಅಭಿಯಂತರರು
ಹೊರಮಾವು ವಾರ್ಡ್‌ಸಂಖ್ಯೆ-25
ಬಿ.ಬಿ.ಎಂ.ಪಿ